**ದಿಃ 23-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮಧ್ಯಂತರ ಅರ್ಜಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ SGG ವಕೀಲರಿಂದಃ-**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಎದುರುದಾರರು ಅರ್ಜಿದಾರರಿಗೆ ಮನಿ ಆರ್ಡರ್ ಮೂಲಕ ಕಳುಹಿಸಿದ ಹಣದ 3 ಅಂಚೆ ರಶೀದಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಆರ್ಃ1 ರಿಂದ ನಿಆರ್.3 ಎಂದು ಗುರುತಿಸಲಾಯಿತು.

ಅಂಚೆ ಇಲಾಖೆಯವರು ನೀಡಿದ ಸ್ವೀಕೃತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಆರ್ಃ4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ MGK ವಕೀಲರಿಂದಃ**

ಅರ್ಜಿ ಆಸ್ತಿಯ ಬಾಡಿಗೆಯ ಕರಾರಿನ ಪ್ರಕಾರ ಬಾಡಿಗೆ ದಿಃ01.09.2023 ರಿಂದ ದಿಃ31.03.2024 ರ ವರೆಗೆ ಇರುತ್ತದೆ ಎಂದರೆ ಸರಿ. ನಿಆರ್.1 ರಿಂದ ನಿಆರ್.3 ಅಂಚೆ ರಶೀದಿಗಳು ಸದರಿ ಬಾಡಿಗೆ ಅವಧಿ ಮುಗಿದ ನಂತರದ ರಶೀದಿಗಳು ಎಂದರೆ ಸರಿ. ಸದರಿ ರಶೀದಿಗಳನ್ನು ನಾನು ಯಾವ ತಿಂಗಳ ಬಾಡಿಗೆ ಬಾಬ್ತು ಕಳುಹಿಸಿರುತ್ತೇನೆ ಎಂದರೆ ಸಾಕ್ಷಿಯು ನಿಆರ್.1 ಜುಲೈ -2024 ರದ್ದು ಎಂದು, ನಿಆರ್.2 ಆಗಸ್ಟ್-2024 ರದ್ದು ಎಂದು ಹಾಗೂ ನಿಆರ್.3 ಸಪ್ಟೆಂಬರ್ -2024 ರದ್ದು ಎಂದು ನುಡಿಯುತ್ತಾರೆ. ಸದರಿ ರಶೀದಿಗಳನ್ನು ಹೊರತು ಪಡಿಸಿ ನಾನು ಬೇರೆ ಯಾವುದೇ ಅಂಚೆ ರಶೀದಿಗಳನ್ನು ಅಥವಾ ಮನಿ ಆರ್ಡರ್ ನ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅರ್ಜಿದಾರರಿಗೆ ನಾನು ನಗದು ರೂಪದಲ್ಲಿ ಬಾಡಿಗೆ ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿಯಾಗಿ ಸದರಿ ಬಾಡಿಗೆ ಹಣವನ್ನು ನಗದಾಗಿ

ಕೊಟ್ಟ ಸಮಯದಲ್ಲಿ, ಅರ್ಜಿದಾರರು ರಶೀದಿಯನ್ನು ಮತ್ತೆ ಕೊಡುತ್ತೇನೆ ಎಂದು ಹೇಳಿದ್ದು, ನನಗೆ ಕೊಟ್ಟಿರುವುದಿಲ್ಲ. ಹಾಗಾದರೆ ನನಗೆ ಅರ್ಜಿದಾರರು ನಾನು ಕೊಟ್ಟ ಬಾಡಿಗೆ ಹಣದ ಯಾವುದೇ ರಶೀದಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸದರಿಯವರು ತಮ್ಮ ಡೈರಿಯಲ್ಲಿ ನನ್ನ ಸಹಿಯನ್ನು ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾರು ಹಣವನ್ನು ಪಡೆಯುತ್ತಾರೆ ಸದರಿಯವರು ದಾಖಲೆಗೆ ಸಹಿ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ನನಗೆ ಆ ರೀತಿಯಾಗಿ ಬಾಡಿಗೆ ರಶೀದಿಗಳನ್ನು ಕೊಡದಿರುವ ಬಗ್ಗೆ ಅರ್ಜಿದಾರರಿಗೆ ಯಾವುದೇ ಲಿಖಿತ ನೋಟೀಸನ್ನು ಕೊಟ್ಟಿರುವುದಿಲ್ಲ. ನಾನು ಅರ್ಜಿದಾರರಿಗೆ ಬಾಡಿಗೆ ಕರಾರಿನ ಪ್ರಕಾರ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ, ನಾನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್.4 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯಲ್ಲಿ ಅರ್ಜಿದಾರರು ಹಣವನ್ನು ತಿರಸ್ಕರಿಸಿದ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಮನಿ ಆರ್ಡರ್ ಮೂಲಕ ಬಾಡಿಗೆ ಹಣವನ್ನು ಅರ್ಜಿದಾರರಿಗೆ ಕಳುಹಿಸಿದ ಹಾಗೆ ನಿಆರ್.4 ರಂತೆ ತೋರಿಸಿದ್ದು, ನಾನೇ ಸದರಿ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಆರ್.1 ರಿಂದ 4 ದಾಖಲೆಗಳನ್ನು ನನ್ನ ಅನುಕೂಲದಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ ಸರಿ ಇದೆ.**

**Sd/-**
**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**